ಆದ್ದರಿಂದ ಈ ಒಂದು ಯೋಜನೆಗೆ ತಾವು ಅನುಮೋದನೆ ಕೊಡಬೇಕು ಎಂದು ನಾನು ವಿನಂತಿ ಮಾಡಿಕೊಳ್ಳುತ್ತಿದ್ದೇನೆ.

ಶ್ರೀ ಆರ್. ಶ್ರೀನಿವಾಸ್ : ಮಾನ್ಯ ಸದಸ್ಯರು ಇವತ್ತು ಕೇವಲ ಬೀಜವನ್ನು ಮಾತ್ರ ಉಪಯೋಗಿಸಲಾಗುತ್ತಿದೆ, ಹಣ್ಣನ್ನು ಯಾರೂ ಕೂಡ ಉಪಯೋಗಿಸದೇ ಅದು ಕೊಳೆತು ಹೋಗುತ್ತಿದೆ ಎಂದು ಹೇಳುತ್ತಿದ್ದಾರೆ, ಇದು ನಿಜ. Food processing unit ಒಂದನ್ನು ಮಾಡಿ ಹಣ್ಣಿನಿಂದ by-products ಮಾಡಿ ಅದರ ಸದುಪಯೋಗ ಪಡೆದುಕೊಳ್ಳತಕ್ಕಂಥ ಸಲಹೆಯನ್ನೇನು ಮಾಡಿದ್ದಾರೆ, ಅದು ಬಹಳ ಉತ್ತಮವಾದುದಾಗಿದೆ. ಆ ಸಲಹೆಯನ್ನು ನಾನು ಸರ್ಕಾರದ ಗಮನಕ್ಕೆ ತರುತ್ತೇನೆ. ಕೇವಲ ಮಂಗಳೂರಿನಲ್ಲಿ ಮಾತ್ರವಲ್ಲ, ನಮ್ಮ ಏರಿಯಾದಲ್ಲೂ ಕೂಡ ಇದರ ಉತ್ಪನ್ನ ಜಾಸ್ತಿಯಾಗುತ್ತಿದೆ. ಬಹುತೇಕ ರೈತರೆಲ್ಲರೂ ಕೂಡ ಇದನ್ನೇ ಅವಲಂಭಿಸಿದ್ದಾರೆ. ಅದರಲ್ಲಿ ನಾನೂ ಕೂಡ ಒಬ್ಬನಾಗಿದ್ದೇನೆ. ನಾನೂ ಕೂಡ ಬಯಲುಸೀಮೆಯವನಾಗಿರುವುದರಿಂದ, ನಾನು ಇದನ್ನು ಸರ್ಕಾರದ ಗಮನಕ್ಕೆ ತಂದು ಸೂಕ್ತವಾದ ಕ್ರಮ ತೆಗೆದುಕೊಳ್ಳುವಂತೆ ಮಾಡುತ್ತೇನೆ. ನಾವು ಯಾವ ರೀತಿಯಲ್ಲಿ 5–6 ಕಡೆಗಳಲ್ಲಿ ಮತ್ತು ಬೆಳಗಾಂನಲ್ಲಿ ಕರ್ನಾಟಕ ಫುಡ್ ಪಾರ್ಕ್ಸ್ ಅನ್ನು ಆರಂಭಿಸುತ್ತೇವೆ ಎಂದು ಘೋಷಿಸಿದ್ದೇವೆಯೋ, ಅದೇ ರೀತಿಯಲ್ಲಿ ಇದನ್ನೂ ಕೂಡ ಮಾಡುವುದಕ್ಕೆ ಚಿಂತನೆ ಮಾಡುತ್ತೇವೆ ಎಂದು ಹೇಳಬಯಸುತ್ತೇನೆ.

ಅಧ್ಯಕ್ಷರು : ಈಗ ಬಿ.ಪಿ. ವೆಂಕಟಮುನಿಯಪ್ಪನವರ ಪ್ರಶ್ನೆ.

ಶ್ರೀ ಕೆ. ಪ್ರಭಾಕರ ಬಂಗೇರ : ಸನ್ಮಾನ್ಯ ಅಧ್ಯಕ್ಷರೇ, ನನಗೆ ಮಾತನಾಡಲಿಕ್ಕೆ ಅವಕಾಶ ಮಾಡಿಕೊಡಬೇಕು. ಗೋಡಂಬಿಯ ವಿಚಾರವಾಗಿ.....

ಅಧ್ಯಕ್ಷರು : ಈಗ ಮಾನ್ಯ ವೆಂಕಟಮುನಿಯಪ್ಪನವರು ತಮ್ಮ ಪ್ರಶ್ನೆಯನ್ನು ಕೇಳಬೇಕು. ದಯಮಾಡಿ ಮಾನ್ಯ ಬಂಗೇರಾರವರು ಕುಳಿತುಕೊಳ್ಳಬೇಕು. ನಾನು ಈಗಾಗಲೇ ಮಾನ್ಯ ವೆಂಕಟಮುನಿಯಪ್ಪನವರನ್ನು ಕರೆದು ಮುಂದಿನ ಪ್ರಶ್ನೆಗೆ ಹೋಗಿರುವುದರಿಂದ ದಯಮಾಡಿ ತಾವು ಕುಳಿತುಕೊಳ್ಳಬೇಕು.

ಬಂಗಾರಪೇಟೆ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯು ಕೈಗೊಂಡಿರುವ ಕಾಮಗಾರಿಗಳು

51(1253) ಶ್ರೀ ವೆಂಕಟಮುನಿಯಪ್ಪ ಬಿ.ಪಿ. (ಬೇತಮಂಗಲ) ಮಾನ್ಯ ಕೃಷಿ ಮಾರುಕಟ್ಟೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) 2004–2005ನೇ ಸಾಲಿನಲ್ಲಿ ಬಂಗಾರಪೇಟೆ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಸ್ಥಳೀಯ ಶಾಸಕರ ಗಮನಕ್ಕೆ ತರದೇ ಕಾಮಗಾರಿಗಳನ್ನು ಮಂಜೂರು ಮಾಡಿಸಿಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಇವುಗಳಲ್ಲಿ ಬಹಳಷ್ಟು ಕಾಮಗಾರಿಗಳು ಅನಗತ್ಯವಾಗಿರುವುದರಿಂದ, ಸರ್ಕಾರದ ಬೊಕ್ಕಸಕ್ಕೆ ನಷ್ಟ ಉಂಟಾಗುವುದಿಲ್ಲವೆ;

ಇ) ಈ ಅನಗತ್ಯ ಕಾಮಗಾರಿಗಳನ್ನು ನಿಲ್ಲಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಪ್ರಕಾಶ್ ಬಿ ಹುಕ್ಕೇರಿ (ಕೃಷಿ ಮಾರುಕಟ್ಟೆ ಸಚಿವರು)

ಅ) ಇಲ್ಲ.

ಆ) ವಾಷಿಕ ಕ್ರಿಯಾ ಯೋಜನೆಯಡಿ ಮಂಜೂರಾದ ಎಲ್ಲಾ ಕಾಮಗಾರಿಗಳು ಮಾರುಕಟ್ಟೆ ಪ್ರಾಂಗಣದಲ್ಲಿ ಮೂಲಭೂತ ಸೌಕರ್ಯಗಳು ಹಾಗೂ ಇತರೆ ಸೌಲಭ್ಯಗಳನ್ನು ಒದಗಿಸಲು ಮಂಜೂರಾಗಿರುತ್ತದೆ.

ಇ) ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಬಿ.ಪಿ. ವೆಂಕಟಮುನಿಯಪ್ಪ : ಮಾನ್ಯ ಅಧ್ಯಕ್ಷರೇ, ಬಂಗಾರಪೇಟೆ ತಾಲ್ಲೂಕಿನಲ್ಲಿ 2004–05ರಲ್ಲಿ ಸುಮಾರು 1 ಕೋಟಿ 5 ಲಕ್ಷ ರೂಪಾಯಿಗಳ ಕಾಮಗಾರಿಗಳನ್ನು ಕೈಗೆತ್ತಿಕೊಂಡಿದ್ದಾರೆ. ಆದರೆ ಈ ಕಾಮಗಾರಿಗಳನ್ನು ಸರಿಯಾಗಿ ಕಾರ್ಯಗತಗೊಳಿಸಿಲ್ಲ. ಇದರಿಂದ ಸರ್ಕಾರಕ್ಕೆ ಬಹಳಷ್ಟು ನಷ್ಟವಾಗಿದೆ. ಇದರ ಬಗ್ಗೆ ಪರಿಶೀಲನೆ ಮಾಡಿ ಮಾನ್ಯ ಸಚಿವರು ಉತ್ತರ ಕೊಡಬೇಕು.

ಶ್ರೀ ಪ್ರಕಾಶ್ ಬಿ. ಹುಕ್ಕೇರಿ : ಮಾನ್ಯ ಅಧ್ಯಕ್ಷರೇ, 2004–05ರಲ್ಲಿ 1 ಕೋಟಿ 5 ಲಕ್ಷ ರೂಪಾಯಿಗಳಿಗೆ 46 ಕಾಮಗಾರಿಗಳಿಗೆ ಮಂಜೂರಾತಿ ಕೊಟ್ಟಿದ್ದೇವೆ. ಈ ಮಂಜೂರಾತಿಯನ್ನು 2000ರ ಫೆಬ್ರವರಿ ಮತ್ತು ಮಾರ್ಚ್ ತಿಂಗಳಿನಲ್ಲಿ ನೀಡಲಾಗಿದೆ. ಅದರಲ್ಲಿ 30 ಕಾಮಗಾರಿಗಳು ಈಗಾಗಲೇ ಪೂರ್ತಿಗೊಂಡಿವೆ. 9 ಕಾಮಗಾರಿಗಳು ಪ್ರಗತಿಯಲ್ಲಿವೆ. ಇನ್ನುಳಿದ 7 ಕಾಮಗಾರಿಗಳಿಗೆ ಟೆಂಡರ್ ಕರೆಯಲು ತಾಂತ್ರಿಕ ಮಂಜೂರಾತಿ ನೀಡಬೇಕಾಗಿದೆ. ನಾನೂ ಕೂಡ ಕಳೆದ ತಿಂಗಳಿನಲ್ಲಿ ಬಂಗಾರುಪೇಟೆಯಲ್ಲಿನ ಕಾಮಗಾರಿಗಳ ಬಗ್ಗೆ ರಿವ್ಯೂ ಮೀಟಿಂಗ್‌ವೊಂದನ್ನು ಮಾಡಿದ್ದೆ. ಅಲ್ಲಿ ನಮ್ಮ ಶಾಸಕರು ಈ ವಿಚಾರವನ್ನು ನನ್ನ ಗಮನಕ್ಕೆ ತಂದಿದ್ದರು. ನಾನು ಅಲ್ಲಿಗೆ ಕಮಿಟಿಯೊಂದನ್ನು ಕಳುಹಿಸುತ್ತಿದ್ದೇನೆ. ಎಲ್ಲಿ ಕಳಪೆ ಕಾಮಗಾರಿಗಳಾಗಿವೆಯೋ, ಅದನ್ನು ತಕ್ಷಣ ನಿಲ್ಲಿಸಿ, ಅದರ ಬಗ್ಗೆ ತನಿಖೆ ಮಾಡಿಸಿ, ಸಂಪೂರ್ಣ ವರದಿಯನ್ನು ಶಾಸಕರಿಗೆ ಕಳುಹಿಸಿಕೊಡುತ್ತೇನೆ.

ಮತ್ತೆ ಅಲ್ಲಿ ಐದು ಲಕ್ಷ ರೂಪಾಯಿಗಳ ಮೌಲ್ಯದ ಗಿಡ ನೆಟ್ಟು ಎಪಿಎಂಸಿ ಮಾರ್ಕೆಟ್‌ನೊಳಗೆ ಒಂದು ಉದ್ಯಾನ ಮಾಡುತ್ತಿದ್ದಾರೆ ಎಂದು ಹೇಳಿದರು. ನಾನು ಎಪಿಎಂಸಿ ವತಿಯಿಂದ ಉದ್ಯಾನ ಮಾಡುವುದನ್ನು ಈ ವರ್ಷದಿಂದ ಎಲ್ಲಾ ಕಡೆ ನಿಲ್ಲಿಸಿದ್ದೇನೆ. ಪ್ರತಿಯೊಂದು ಎಪಿಎಂಸಿಯವರು ಒಂದೊಂದು ಯೋಜನೆಯಲ್ಲಿ ಏನೇನು ಎಪಿಎಂಸಿ ಯಾರ್ಡ್‌ನಲ್ಲಿ 5 ಲಕ್ಷ ರೂಗಳ ಮೌಲ್ಯದ ಗಿಡ ಹಚ್ಚುವುದು ಅಥವಾ ಉದ್ಯಾನ ಮಾಡುವುದು ಇದೆ. ಇಂತಹ ಕಾರ್ಯಕ್ರಮಗಳನ್ನು ತೆಗೆಯಬೇಕೆಂದು ಹೇಳಿ ಅದನ್ನು ಬಂದ್ ಮಾಡಿದ್ದೇನೆ. ಏಕೆಂದರೆ ಗಿಡ ಹಚ್ಚುವುದು ಆಗ್ರಿಕಲ್ಚರ್ ಡಿಪಾರ್ಟ್‌ಮೆಂಟ್‌ನವರು ಮಾಡುತ್ತಾರೆ. ಆದುದರಿಂದ ಅದನ್ನು ನಾವು ಮಾಡುವುದು ಬೇಡವೆಂದು ಹೇಳಿ ಸೆಕ್ರೆಟರಿಯವರನ್ನು ಕರೆದು

ನೀವು ಯಾವುದನ್ನೂ ಕೂಡ ಮಾಡಕೂಡದು. ಅವಶ್ಯಕತೆ ಇದ್ದ ಕಾಮಗಾರಿಗಳನ್ನು ಮಾತ್ರ ತೆಗೆದುಕೊಳ್ಳಬೇಕೆಂದು ಸೂಚನೆ ಕೊಟ್ಟಿದ್ದೇನೆ. 2004ರ ಫೆಬ್ರವರಿ ತಿಂಗಳಲ್ಲಿ ಈ ಕಾಮಗಾರಿ ಮಂಜೂರಾಗಿದ್ದರಿಂದ ಅದಕ್ಕೆ ಸಂಬಂಧಪಟ್ಟ ಹಾಗೆ ಈಗಾಗಲೇ ಸೆಕ್ರೆಟರಿಯವರಿಗೆ ಒಂದು ಆದೇಶ ಕೂಡ ಮಾಡಿದ್ದೇನೆ. ಮುಂದಿನ ಕಾಮಗಾರಿ ತೆಗೆದುಕೊಳ್ಳಬೇಕಾದರೆ ಮಾನ್ಯ ಶಾಸಕರೊಂದಿಗೆ ಸಮಾಲೋಚಿಸಿ ಮಾಡುತ್ತೇವೆ. ಸೆಕ್ರೆಟರಿಯವರು ಕೂಡ ತಮ್ಮ ಸಂಪರ್ಕ ಬೆಳೆಸಿ ಯಾವುದು ಮಹತ್ವವಿದೆ, ಯಾವುದು ಎಪಿಎಂಸಿಗೆ ಮಾಡಬೇಕಾಗಿದೆ ಅಂತಹ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಈಗಾಗಲೇ ಸೂಚನೆಯನ್ನು ನೀಡಿದ್ದೇನೆ. ಆ ಪ್ರಕಾರ ಕಳಪೆ ಕಾಮಗಾರಿ ಮಾಡಿರುವುದು ಎಲ್ಲಿ ಆಗಿದ್ದರೂ ಕೂಡ ಅದರ ಬಗ್ಗೆ ಸಂಪೂರ್ಣವಾಗಿ ತನಿಖೆಯನ್ನು ಮಾಡಿಸುತ್ತೇನೆ.

ಶ್ರೀ ಬಿ.ಪಿ. ವೆಂಕಟಮುನಿಯಪ್ಪ : ಮಾನ್ಯ ಸಚಿವರು ನನ್ನ ಜೊತೆ ಏನು ಕಳಪೆ ಕಾಮಗಾರಿಯಾಗಿದೆ ಅದನ್ನು ಪರಿಶೀಲನೆ ಮಾಡಿ ಅದಕ್ಕೆ ಕ್ರಮವನ್ನು ತೆಗೆದುಕೊಳ್ಳಬೇಕು.

ಅಧ್ಯಕ್ಷರು : ತಾವು ಕಳಪೆ ಕಾಮಗಾರಿಗಳನ್ನು ಪರಿಶೀಲನೆ ಮಾಡಬೇಕು, ನಾನೂ ಅವರ ಜೊತೆಗೆ ಇರುತ್ತೇನೆ ಎಂದು ಹೇಳುತ್ತಾರೆ.

ಶ್ರೀ ಪ್ರಕಾಶ್ ಬಿ. ಹುಕ್ಕೇರಿ : ಈಗಾಗಲೇ 46ರಲ್ಲಿ 30 ಕಾಮಗಾರಿಗಳು ಪೂರ್ಣವಾಗಿದೆ. ನಾನು ಮಾನ್ಯ ಸದಸ್ಯರನ್ನು ಕರೆದುಕೊಂಡು ಹೋಗಿ ಪರಿಶೀಲನೆ ಮಾಡುತ್ತೇನೆ.

ಮುಂಡರಗಿ ತಾಲ್ಲೂಕು ಹಾರೋಗೇರಿ ಗ್ರಾಮದಲ್ಲಿ ಶಾಲಾ ಮಕ್ಕಳಿಗೆ ಹಂಚುವ ಆಹಾರದಲ್ಲಿನ ಅವ್ಯವಹಾರ

52(736) ಶ್ರೀ ಪಾಟೀಲ್ ಎಸ್.ಎಸ್. (ಮುಂಡರಗಿ) ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಗದಗ ಜಿಲ್ಲೆ ಮುಂಡರಗಿ ತಾಲ್ಲೂಕು ಹಾರೋಗೇರಿ ಗ್ರಾಮದಲ್ಲಿ ಶಾಲಾ ಮಕ್ಕಳಿಗಾಗಿ ಹಂಚುವ ಆಹಾರ ಧಾನ್ಯವನ್ನು ಶಾಲಾ ಮಕ್ಕಳಿಗೆ ಹಂಚದೇ ಆ ಗ್ರಾಮದ ವ್ಯವಸಾಯ ಸೇವಾ ಸಹಕಾರ ಬ್ಯಾಂಕಿನ ಕಾರ್ಯದರ್ಶಿ ದುರುಪಯೋಗ ಮಾಡಿಕೊಂಡಿದ್ದು ನಿಜವೇ;

ಆ) ಹಾಗಿದ್ದರೆ ಅವರ ಮೇಲೆ ಇನ್ನೂ ಕ್ರಮ ಕೈಗೊಳ್ಳದಿರಲು ಕಾರಣಗಳೇನು?

ಶ್ರೀ ಆರ್.ವಿ. ದೇಶಪಾಂಡೆ (ಸಹಕಾರ ಸಚಿವರು)

ಅ) ದುರುಪಯೋಗ ಆಗಿರುವುದಿಲ್ಲ.

ಆ) ಶಾಲಾ ಮಕ್ಕಳಿಗೆ ಆಹಾರ ಧಾನ್ಯ ವಿತರಣೆ ಮಾಡಿಲ್ಲವೆಂದು ಗ್ರಾಮಸ್ಥರಿಂದ ದೂರು ಬಂದ ಪ್ರಯುಕ್ತ ವ್ಯವಸ್ಥಾಪಕರನ್ನು ಸಿಸಿಸಿ ವತಿಯಿಂದ ಅಮಾನತ್ತುಗೊಳಿಸಿ ಆದೇಶ ಮಾಡಲಾಗಿರುತ್ತದೆ. ನಂತರ ವ್ಯವಸ್ಥಾಪಕರ ಮೇಲೆ ಆಂತರಿಕ ವಿಚಾರಣೆ